	53	ಮುಳಬಾಗಿಲು
ಚಿಕ್ಕಬಳ್ಳಾಪುರ	54	ಬಂಗಾರಪೇಟೆ
	55	ಚಿಂತಾಮಣಿ
	56	ಬಾಗೇಪಲ್ಲಿ
	57	ಗುಡಿಬಂಡೆ
	58	ಗೌರಿಬಿದನೂರು
ಮಧುಗಿರಿ	59	ಪಾವಗಡ
ಚಿತ್ರದುರ್ಗ	60	ಚಳ್ಳಕೆರೆ
	61	ಮೊಳಕಾಲ್ಮೂರು
ದಾವಣಗೆರೆ	62	ಹರಪನಹಳ್ಳಿ
ಮೈಸೂರು	63	ಕೆ.ಆರ್.ನಗರ
ಹಾಸನ	64	ಹೊಳೇನರಸೀಪುರ

345 ಶ್ರೀ ರೋಷನ್ ಬೇಗ್ ಆರ್. (ಶಿವಾಜಿನಗರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಳೆಯಾಗಿ ಜಲಾಶಯಗಳು ಭರ್ತಿಯಾಗಿದ್ದರೂ ವಿದ್ಯುತ್ ಕೊರತೆ ಇದ್ದು ಅವಶ್ಯಕವಿರುವ ವಿದ್ಯುತ್‌ನ್ನು ಸಮರ್ಪಕವಾಗಿ ಸರಬರಾಜು ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ;

ಆ) ಗುಂಡ್ಯಾದಲ್ಲಿ 400 ಮೆಘಾ ವ್ಯಾಟ್ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಇದರ ಪ್ರಗತಿಯ ವರದಿಯನ್ನು ನೀಡುವುದು;

ಇ) ಈ ಉತ್ಪಾದನಾ ಘಟಕಕ್ಕೆ ಅವಶ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ;

ಈ) ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಮೆಘಾ ವ್ಯಾಟ್ ವಿದ್ಯುತ್ ಉತ್ಪಾದನೆಯ ಯೋಜನೆ ಹಮ್ಮಿಕೊಳ್ಳಲಾಗಿದೆ ಹಾಗೂ ಈ ಯೋಜನೆಗಳಿಂದ ರಾಜ್ಯದಲ್ಲಿ ವಿದ್ಯುತ್ ಕೊರತೆ ನೀಗುವುದೇ ಎಂದು ಪೂರ್ಣ ಮಾಹಿತಿಯನ್ನು ನೀಡುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಉತ್ತಮವಾಗಿ ಮಳೆಯಾಗಿ, ಜಲ ವಿದ್ಯುತ್ ಘಟಕಗಳಾದಂತಹ ಲಿಂಗನಮಕ್ಕಿ (ಶರಾವತಿ) ಪೂರ್ಣವಾಗಿ (1819 ಅಡಿಗಳು) ತುಂಬಿತ್ತು. ಆದರೆ, ಉಳಿದ ಸೂಪ ಮತ್ತು ಮಾಣಿ ವಿದ್ಯುತ್ ಅಣೆಕಟ್ಟುಗಳು ಕ್ರಮವಾಗಿ ಶೇಕಡಾ 64 ಮತ್ತು 74 ರಷ್ಟು ಮಾತ್ರ ತುಂಬಿದ್ದು, ಒಟ್ಟಾರೆ ಎಲ್ಲಾ ಅಣೆಕಟ್ಟುಗಳ ಪ್ರಮಾಣ ಸುಮಾರು ಶೇಕಡಾ 84 ರಷ್ಟು ಮಾತ್ರ ತುಂಬಿರುತ್ತದೆ.

ರಾಜ್ಯದಲ್ಲಿರುವ ವಿದ್ಯುತ್ ಕೊರತೆಯನ್ನು ಸರಿದೂಗಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಯೋಜಿಸಿದೆ.

2007–08ನೇ ಸಾಲಿನಲ್ಲಿ 276 ಮೆ.ವ್ಯಾ. ನಷ್ಟು ಹಾಗೂ 2008–09ನೇ ಸಾಲಿನಲ್ಲಿ 1251.95 ಮೆ.ವ್ಯಾ. ನಷ್ಟು ವಿದ್ಯುತ್ ಉತ್ಪಾದನಾ ಸಮರ್ಥ್ಯವು ಹೆಚ್ಚಳವಾಗಿದೆ.

ಪ್ರಸಕ್ತ ಸಾಲಿನಲ್ಲಿ (2009–10) 1,422 ಮೆ.ವ್ಯಾ. ನಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ. ವಿವರಗಳು ಕೆಳಕಂಡಂತಿವೆ.

- ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಕೇಂದ್ರದ 8ನೇ ಘಟಕ (ಮಾರ್ಚ್–10) –250 ಮೆ.ವ್ಯಾ.
- ಅಸಂಪ್ರದಾಯಕ ವಿದ್ಯುತ್ ಮೂಲಗಳಿಂದ (ಗಾಳಿ ವಿದ್ಯುತ್ – 450 ಮೆ.ವ್ಯಾ + ಕಿರು ಜಲ –122 ಮೆ.ವ್ಯಾ) –572 ಮೆ.ವ್ಯಾ
- ಉಡುಪಿ ಪವರ್ ಕಾರ್ಪೋರೇಷನ್ 1ನೇ ಘಟಕ (ಮಾರ್ಚ್–ಏಪ್ರಿಲ್–2010ರಲ್ಲಿ) –600 ಮೆ.ವ್ಯಾ.

ಅಲ್ಪಕಾಲಿಕ ಕ್ರಮಗಳು :

- ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಮಳೆಯಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ, ಪ್ರಸ್ತುತ ಪ್ರತಿನಿತ್ಯ 10 ಮಿಲಿಯನ್ ಯೂನಿಟ್‌ಗಳಷ್ಟು ಹೆಚ್ಚುವರಿ ಜಲ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಜೂನ್ 2010 ರವರೆಗೂ ಈ ಹೆಚ್ಚುವರಿ ಜಲ ವಿದ್ಯುತ್‌ನ್ನು ಉತ್ಪಾದಿಸಲಾಗುವುದು.

- ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ಪಾಲು 1,534 ಮೆ.ವ್ಯಾ. ನಷ್ಟಿದ್ದು, ಪ್ರಸ್ತುತ 1200 ಮೆ.ವ್ಯಾ. ನಷ್ಟು ವಿದ್ಯುತ್ ಮಾತ್ರ ಲಭ್ಯವಾಗುತ್ತಿದೆ. ಆದುದರಿಂದ, ರಾಜ್ಯದ ಪಾಲನ್ನು ಪೂರ್ಣ ಪ್ರಮಾಣದಲ್ಲಿ ಪಡೆದುಕೊಳ್ಳಲು ಉನ್ನತ ಮಟ್ಟದಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಮಧ್ಯಮಾವಧಿ ಹಾಗೂ ಧೀರ್ಘಕಾಲಿಕ ಕ್ರಮಗಳು :

- 2010–11 ರಿಂದ 2012–13ರ ವೇಳೆಗೆ ಕರ್ನಾಟಕ ರಾಜ್ಯಕ್ಕೆ ಹೆಚ್ಚುವರಿಯಾಗಿ ಕೆಳಕಂಡ ಮೂಲಗಳಿಂದ 11,111 ಮೆ.ವ್ಯಾ.ನಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಸೇರ್ಪಡೆಗೊಳಿಸಲು ಉದ್ದೇಶಿಸಲಾಗಿದೆ.
- ಕೆ.ಪಿ.ಸಿ.ಎಲ್–3,654 ಮೆ.ವ್ಯಾ.
- ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್, ಬಿಜಾಪುರ ಜಿಲ್ಲೆ ಕುಡಿಗಿಯಲ್ಲಿ (ಎನ್.ಟಿ.ಪಿಸಿ) –4,000 ಮೆ.ವ್ಯಾ. ಇದರಲ್ಲಿ ರಾಜ್ಯಕ್ಕೆ 2,000 ಮೆ.ವ್ಯಾ. ವಿದ್ಯುತ್ ಲಭ್ಯವಾಗಲಿದೆ.
- ಗುಲ್ಬರ್ಗಾ ಮತ್ತು ಘಟಪ್ರಭಗಳಲ್ಲಿ ಖಾಸಗೀ ವಲಯದಲ್ಲಿ ವಿದ್ಯುತ್ ಉತ್ಪಾದನಾ ಯೋಜನೆಗಳು –2,640 ಮೆ.ವ್ಯಾ
- ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ಪಾಲು– 1.079 ಮೆ.ವ್ಯಾ.
- ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್‌ನ 2ನೇ ಘಟಕ 600 ಮೆ.ವ್ಯಾ.
- ಅಸಂಪ್ರದಾಯ ವಿದ್ಯುತ್ ಮೂಲಗಳಿಂದ –1,138 ಮೆ.ವ್ಯಾ

ಆ) ಹೌದು–

400 ಮೆ.ವ್ಯಾ. ಗುಂಡ್ಯಾ ಜಲ ವಿದ್ಯುತ್ ಯೋಜನೆಯನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಮೊದಲನೆ ಹಂತ 1 x 200 ಮೆ.ವ್ಯಾ.

ಎರಡನೆ ಹಂತ 1 x 200 ಮೆ.ವ್ಯಾ.
ಪ್ರಸ್ತುತ ಮೊದಲನೆ ಹಂತ 1 x 200 ಮೆ.ವ್ಯಾ. ಯೋಜನೆಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

- ಕರ್ನಾಟಕ ಸರ್ಕಾರವು ಸದರಿ ಯೋಜನೆಯನ್ನು ದಿ: 06–10–1998 ರಂದು ಕವಿನಿನಿಗೆ ಮಂಜೂರು ಮಾಡಿದೆ.
- ಕೇಂದ್ರ ವಿದ್ಯುತ್ ಪ್ರಾಧಿಕಾರವು ದಿ: 25–04–2008 ರಂದು ತಾಂತ್ರಿಕ–ಆರ್ಥಿಕ ತೀರುವಳಿ ನೀಡಿದೆ.
- ಕರ್ನಾಟಕ ಸರ್ಕಾರದ ಇನ್ನಿತರ ಇಲಾಖೆಗಳಿಂದ ತೀರುವಳಿ ಪಡೆಯಲಾಗಿದೆ.
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿ: 25–03–2009 ರಂದು ಸಾರ್ವಜನಿಕ ಅಹವಾಲು ಸಭೆ ನಡೆಸಲಾಗಿದ್ದು ಜಿಲ್ಲಾಧಿಕಾರಿಗಳ ವರದಿಯನ್ನು ಕರ್ನಾಟಕ ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗಿದೆ.
- ಎಲ್ಲ ಪ್ರಸ್ತಾವಿತ ಆಣೆಕಟ್ಟುಗಳ ಎಫ್.ಆರ್.ಎಲ್. ಸರ್ವೆ ಕೆಲಸ ಮುಗಿದಿದೆ.
- ಭೂ–ತಾಂತ್ರಿಕ ಅನ್ವೇಷಣಾ ಕಾರ್ಯ ಪ್ರಗತಿಯಲ್ಲಿದೆ.
- ಹಂತ–II ರ ಎಲ್ಲಾ ಆಣೆಕಟ್ಟುಗಳ ಪ್ರದೇಶದ ಹಾಗೂ ಅಂತರ್–ಜೋಡಣಾ–ನಿರಂಗದ ಭೂ–ಮೇಲ್ಭಾಗದ ಸರ್ವೆ ಕಾರ್ಯ ಪೂರ್ಣಗೊಂಡಿದೆ. ಪರಿಸರದ ಮೇಲೆ ಉಂಟಾಗುವ ಪರಿಣಾಮದ ನಿರ್ಧರಣಾ ಅಭ್ಯಾಸಗಳು ಪ್ರಗತಿಯಲ್ಲಿವೆ.

ಯೋಜನಾ ಪರಿಸರ ವರದಿಯನ್ನು ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ. ಈ ಬಗ್ಗೆ ತೀರುವಳಿ ನಿರೀಕ್ಷಿಸಲಾಗಿದೆ. ದಿನಾಂಕ: 5.12.2009 ರಂದು ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಉಪ ಸಮಿತಿಯು ಯೋಜನಾ ಪ್ರದೇಶದ ಪರಿಶೀಲನೆ ನಡೆಸಿರುತ್ತಾರೆ. ತೀರುವಳಿ ನಿರೀಕ್ಷಿಸಲಾಗಿದೆ.

ಇ) -ಇಲ್ಲ–

ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಪರಿಸರ ತೀರುವಳಿ ದೊರಕಿದ ನಂತರ, ಉತ್ಪಾದನಾ ಘಟಕಕ್ಕೆ ಅವಶ್ಯವಿರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುವುದು.

ಈ) 11ನೇ ಪಂಚವಾರ್ಷಿಕ ಯೋಜನೆಯ ಅವಧಿಯಾದ 2007–2012 ರಲ್ಲಿ ಒಟ್ಟು 4,795 ಮೆ.ವ್ಯಾ ಹೆಚ್ಚುವರಿ ವಿದ್ಯುತ್ ಉತ್ಪಾದನೆಗೆ ಗುರಿ ಹೊಂದಲಾಗಿದೆ.

ಕಳೆದ 2 ವರ್ಷಗಳಲ್ಲಿ 1,527.95 ಮೆ.ವ್ಯಾ. ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಲಾಗಿದೆ. ವಿವರಗಳು ಕೆಳಕಂಡಂತಿವೆ:

ಹೆಚ್ಚುವರಿಯಾಗಿ ಸೇರ್ಪಡೆಗೊಂಡ ಉತ್ಪಾದನಾ ಸಾಮರ್ಥ್ಯ (ಮೆ.ವ್ಯಾ.ಗಳಲ್ಲಿ)	
ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ	500.00
ವರಾಹಿ ಜಲ ವಿದ್ಯುತ್ ಕೇಂದ್ರ	230.00
ಅಸಂಪ್ರದಾಯ ಮೂಲಗಳು	797.95
ಒಟ್ಟು	**1527.95**

ಪ್ರಸಕ್ತ ವರ್ಷವಾದ 2009–10 ರಲ್ಲಿ 1,422 ಮೆ.ವ್ಯಾ. ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಲು ಗುರಿ ನಿಗದಿಪಡಿಸಲಾಗಿದೆ. ವಿವರಗಳು ಕೆಳಕಂಡಂತಿವೆ:

- ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಕೇಂದ್ರದ 8ನೇ ಘಟಕ (ಮಾರ್ಚ್–10) –250 ಮೆ.ವ್ಯಾ.
- ಅಸಂಪ್ರದಾಯ ವಿದ್ಯುತ್ ಮೂಲಗಳಿಂದ (ಗಾಳಿ ವಿದ್ಯುತ್ – 450 ಮೆ.ವ್ಯಾ. + ಕಿರು ಜಲ – 122 ಮೆ.ವ್ಯಾ.) –572 ಮೆ.ವ್ಯಾ.
- ಉಡುಪಿ ಪವರ್ ಕಾರ್ಪೋರೇಷನ್ 1ನೇ ಘಟಕ (ಮಾರ್ಚ್ –ಏಪ್ರಿಲ್ 2010ರಲ್ಲಿ) – 600 ಮೆ.ವ್ಯಾ.

2010–11ನೇ ಸಾಲಿನಲ್ಲಿ 1,510 ಮೆ.ವ್ಯಾ. ನಷ್ಟು ಹಾಗೂ 2011–12ನೇಸಾಲಿನಲ್ಲಿ 335 ಮೆ.ವ್ಯಾ. ನಷ್ಟು ಹೆಚ್ಚುವರಿಯಾಗಿ ಸೇರ್ಪಡೆ ಗೊಳಿಸಲು ಗುರಿ ಹೊಂದಲಾಗಿದೆ.

ಮುಂದಿನ 5 ವರ್ಷಗಳಲ್ಲಿ ರಾಜ್ಯವು ವಿದ್ಯುತ್ ಉತ್ಪಾದನೆಯ ವಿಷಯದಲ್ಲಿ ಸಂಪೂರ್ಣ ರೀತಿಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ.

849 ಶ್ರೀ ಜಾರ್ಜ್ ಕೆ.ಜೆ. (ಸರ್ವಜ್ಞನಗರ) : ಮಾನ್ಯ ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವಜ್ಞನಗರ ಮತಕ್ಷೇತ್ರದ ಬಾಣಸವಾಡಿಯಲ್ಲಿ ನಿರ್ಮಿಸಲಾಗುತ್ತಿರುವ ಸಾರ್ವಜನಿಕ ಗ್ರಂಥಾಲಯ ಕಟ್ಟಡದ ಕಾಮಗಾರಿಯು ತಡವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಟ್ಟಡವನ್ನು ಪೂರ್ಣಗೊಳಿಸುವಲ್ಲಿ ಎದುರಾಗಿರುವ ಸಮಸ್ಯೆಗಳೇನು?

ಇ) ಈ ಕಟ್ಟಡವನ್ನು ಪೂರ್ಣಗೊಳಿಸಲು ಹಾಗೂ ಸಾರ್ವಜನಿಕರಿಗೆ ಬಳಕೆಮಾಡಿಕೊಳ್ಳಲು ಬೇಕಾದ ಅವಧಿ.

ಶ್ರೀ ಶಿವನಗೌಡ ನಾಯಕ್ (ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ಬಂದಿದೆ

ಆ) ಪರಿಷ್ಕೃತ ಅಂದಾಜು ಪಟ್ಟಿಯಲ್ಲಿ ಅಂದಾಜು ವೆಚ್ಚವು ಮೂಲ ಅಂದಾಜುಪಟ್ಟಿಗಿಂತ ಶೇಕಡ 108.07 ಹೆಚ್ಚುವರಿಯಾಗಿತ್ತು.

ಇ) 4 ತಿಂಗಳಲ್ಲಿ

160 ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 5 ಮಕ್ಕಳಿಗಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;